# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1219

ಸದಸ್ಯರ ಹೆಸರು : ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.03.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ತೋಟಗಾರಿಕೆ ಇಲಾಖೆಯಲ್ಲಿ ಬರುವ ಪ್ರಸ್ತುತ ಯೋಜನೆಗಳು ಯಾವುವು: (ಸಂಪೂರ್ಣ ಮಾಹಿತಿ ನೀಡುವುದು) | ತೋಟಗಾರಿಕೆ ಇಲಾಖೆಯಲ್ಲಿ ಬರುವ ಪ್ರಸ್ತುತ ಯೋಜನೆಗಳು ಈ ಕೆಳಕಂಡಂತಿವೆ:-<br>1. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ<br>2. ರಾಷ್ಟ್ರೀಯ ತೋಟಗಾರಿಕೆ ಮಿಷನ್<br>3. ರಾಷ್ಟ್ರೀಯ ಖಾದ್ಯತೈಲ ಅಭಿಯಾನ - ತಾಳೆಎಣ್ಣೆ<br>4. ಪರಂಪರಾಗತ ಕೃಷಿ ವಿಕಾಸ ಯೋಜನೆ<br>5. ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ ಯೋಜನೆ<br>6. ಕೃಷಿಯಾಂತ್ರೀಕರಣ ಉಪ ಅಭಿಯಾನ<br>7. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ<br>8. ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ<br>9. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ<br>10. ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು ಯೋಜನೆ<br>11. ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ<br>12. ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ ಯೋಜನೆ<br>13. ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ<br>14. ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ ಯೋಜನೆ<br>15. ಜೇನು ಸಾಕಾಣೆ ಅಭಿವೃದ್ಧಿ (ಜಿಲ್ಲಾ ವಲಯ ಯೋಜನೆ)<br>16. ಪ್ರಚಾರ ಮತ್ತು ಸಾಹಿತ್ಯ(ಜಿಲ್ಲಾ ವಲಯ ಯೋಜನೆ) |

| | | |
|---|---|---|
| ಆ. | ಅನೂಸೂಚಿತಜಾತಿಗಳಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ತೋಟಗಾರಿಕಾ ಇಲಾಖೆಯಲ್ಲಿ ಬುಡಕಟ್ಟು ಜನರಿಗಾಗಿ ಯಾವುದಾದರೂ ವಿಶೇಷ ಯೋಜನೆಗಳು ಇದೆಯೇ? (ಇದ್ದಲ್ಲಿ ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br><br>2024-25ನೇ ಸಾಲಿನಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ರೈತರು ಖರೀದಿಸುವ ಪವರ್ ಟಿಲ್ಲರ್/ಪವರ್ ವೀಡರ್ ಉಪಕರಣಕ್ಕೆ ಶೇ.90 ರಂತೆ ಸಹಾಯಧನ ನೀಡುವ ಕಾರ್ಯಕ್ರಮವನ್ನು ರೂಪಿಸಲಾಗಿರುತ್ತದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ರೈತರು ಖರೀದಿಸುವ 8 BHP & above 8 BHP ಪವರ್ ಟಿಲ್ಲರ್‌ಗೆ ಅಥವಾ ಪವರ್ ವೀಡ್‌ಗೆ ಶೇ.90ರಂತೆ ಗರಿಷ್ಠ ರೂ.1.0 ಲಕ್ಷದವರೆಗೆ ಸಹಾಯಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಪ್ರಸಕ್ತ ಸಾಲಿಗೆ ಸದರಿ ಕಾರ್ಯಕ್ರಮದಡಿ ರೂ.220.60 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಇಲ್ಲಿಯವರೆಗೆ 276 ಫಲಾನುಭವಿಗಳಿಗೆ ರೂ. 203.23 ಲಕ್ಷಗಳಷ್ಟು ಸಹಾಯಧನ ಒದಗಿಸಲಾಗಿರುತ್ತದೆ. |

**HORTI 120 HGM 2025**

(ಎಸ್. ಎಸ್. ಮಲ್ಲಿಕಾರ್ಜುನ್)

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು